ವಾರ್ತಾ ಭಾರತಿ
Shimoga

# ‘ಕೃಷಿ ಭೂಮಿ ಒತ್ತುವರಿ ತಪ್ಪಿಸಿದಾಗ ಮಾತ್ರ ಉತ್ಪಾದನೆ ಹೆಚ್ಚಳ ಸಾಧ್ಯ’



ಬೆಂಗಳೂರು, ಎ. 14: ಅಭಿವೃದ್ಧಿ ಹೆಸರಿನಲ್ಲಿ ಕೃಷಿ ಭೂಮಿ ಒತ್ತುವರಿ ಮಾಡಿಕೊಳ್ಳುತ್ತಿರುವುದನ್ನು ತಪ್ಪಿಸಿ, ವ್ಯವಸಾಯಕ್ಕೆ ಸೀಮಿತ ಮಾಡಿದಾಗ ಮಾತ್ರ ಉತ್ಪಾದನೆ ಹೆಚ್ಚಿಸಲು ಸಾಧ್ಯ ಎಂದು ಕೃಷಿ ಬೆಲೆ ಆಯೋಗದ ಅಧ್ಯಕ್ಷ ಟಿ.ಎನ್.ಪ್ರಕಾಶ್ ತಿಳಿಸಿದ್ದಾರೆ.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ಜಿಕೆವಿಕೆಯಲ್ಲಿ ಹಮ್ಮಿಕೊಂಡಿದ್ದ 28ನೆ ವಾರ್ಷಿಕ ಕಿರುಧಾನ್ಯಗಳ ಸಂಶೋಧನಾ ಅಭಿವೃದ್ಧಿ ವಾರ್ಷಿಕ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ದೇಶದಲ್ಲಿ 142 ದಶಲಕ್ಷ ಎಕ್ಟೇರ್ ಕೃಷಿ ಭೂಮಿಯಲ್ಲಿ 100 ದಶಲಕ್ಷ ಮಾತ್ರ ಇಂದು ಉಳಿದುಕೊಂಡಿದ್ದು, 42 ದಶಲಕ್ಷ ಪ್ರದೇಶ ವಾಣಿಜ್ಯೀಕರಣದ ಅಭಿವೃದ್ಧಿ ಪಾಲಾಗಿದೆ ಎಂದು ಹೇಳಿದರು.

ಸರಕಾರ ಜಾರಿ ಮಾಡಿರುವ ಅನ್ನಭಾಗ್ಯ ಯೋಜನೆಗೆ ಅವಶ್ಯಕತೆ ಇರುವ 2.1 ಲಕ್ಷ ಟನ್ ರಾಗಿ ರಾಜ್ಯದಲ್ಲೇ ಉತ್ಪಾದನೆ ಮಾಡಲಾಗುತ್ತಿದೆ. ಇನ್ನುಳಿದಂತೆ ಜೋಳ ಪೂರೈಕೆಗೆ ಸುಮಾರು 21 ಲಕ್ಷ ಟನ್ ಅವಶ್ಯಕತೆಯಿದ್ದು, ಕೇವಲ 7 ಸಾವಿರ ಟನ್ ಉತ್ಪಾದನೆಯಾಗುತ್ತಿದೆ. ಅಕ್ಕಿಯು 14 ಲಕ್ಷ ಟನ್‌ನಷ್ಟು ಉತ್ಪಾದನೆಯಾಗುತ್ತಿದ್ದು, ಈ ಅಕ್ಕಿ ಮತ್ತು ಗೋಧಿ ಪ್ರಮಾಣದಲ್ಲಿ ಹೆಚ್ಚಳವಾಗಬೇಕಿದೆ ಎಂದು ವಿವರಿಸಿದರು.

ಸಿರಿಧಾನ್ಯಯೋಜನೆಗಳ ಮಾಜಿ ಸಂಚಾಲಕ ಡಾ.ಎ.ಸೀತಾರಾಂ ಮಾತನಾಡಿ, ಸಿರಿಧಾನ್ಯ ಬೆಳೆಗಳಿಗೆ ಸರಕಾರ ನಿಗದಿ ಮಾಡಿರುವ ಬೆಂಬಲ ಬೆಲೆ ತೀರ ಕಡಿಮೆಯಾದ ಕಾರಣ ಲಾಭವಿಲ್ಲದ ಬೆಳೆ ಎಂದು ಸಿರಿಧಾನ್ಯ ನಿರ್ಲಕ್ಷ್ಯಕ್ಕೊಳಗಾಗುತ್ತಿದೆ. ಕನಿಷ್ಠ 4 ರಿಂದ 5 ಸಾವಿರ ರೂ. ಬೆಂಬಲ ಬೆಲೆ ನಿಗದಿಪಡಿಸಿದರೆ ಮಾತ್ರ ರೈತರಿಗೆ ಪ್ರಯೋಜನವಾಗಲಿದೆ ಎಂದರು.

ರಾಗಿಯನ್ನು ಹೆಚ್ಚಾಗಿ ಬೆಳೆಯುತ್ತಿದ್ದ ಕರ್ನಾಟಕದಲ್ಲಿ ಇತ್ತೀಚಿನ ದಿನಗಳಲ್ಲಿ ಈ ಪ್ರಮಾಣ ವ್ಯಾಪಕವಾಗಿ ಕಡಿಮೆಯಾಗಿದ್ದು, ಪಕ್ಕದ ತಮಿಳುನಾಡಿನಲ್ಲಿ ಹೆಚ್ಚಾಗಿದೆ. ರಾಗಿಗೆ ನೀಡುತ್ತಿರುವ ಬೆಂಬಲ ಬೆಲೆ ಅಲ್ಲಿ ಹೆಚ್ಚಾಗಿರುವ ಕಾರಣ ಜನರು ರಾಗಿಯನ್ನು ಬೆಳೆಯಲು ಮುಂದೆ ಬರುತ್ತಿದ್ದಾರೆ ಎಂದರು. ಕಾರ್ಯಕ್ರಮದಲ್ಲಿ ಕೃಷಿ ವಿಶ್ವವಿದ್ಯಾನಿಲಯದ ಕುಲಪತಿ ಹೆಚ್.ಶಿವಣ್ಣ, ಹೈದರಾಬಾದ್‌ನ ಐಐಎಂಆರ್ ನಿರ್ದೇಶಕ ಡಾ. ವಿ.ಎ. ಟೋಣಾಪಿ ಮತ್ತಿತರರು ಉಪಸ್ಥಿತರಿದ್ದರು.